## ರವಿಕೆಯಲ್ಲಿ ದುರ್ಗಾ ದೇವಿ ವಿನ್ಯಾಸ ಟ್ರೆಂಡ್

ಹಬ್ಬದ ಸಮಯದಲ್ಲಿ ದೇವಿಯ ಚಿತ್ತಾರವನ್ನೊಳಗೊಂಡ ರವಿಕೆ ಹಾಗೂ ಸೀರೆಗಳು ಟ್ರೆಂಡ್ ಆಗಿವೆ. ಅದರಲ್ಲೂ ದಸರಾ ಹಬ್ಬದ ಈ ಸಮಯದಲ್ಲಿ ದುರ್ಗಾ ಮಾತೆಯ ವಿನ್ಯಾಸದ ರವಿಕೆ ಹಾಗೂ ಸರ, ಒಡವೆಗಳು ಫ್ಯಾಷನ್ ಲೋಕಕ್ಕೆ ಕಾಲಿಟ್ಟಿವೆ.

'ಬಂಗಾಲಿ ಶೈಲಿಯ ದುರ್ಗಾ ಮಾತೆಯ ಮುಖ ಇರುವಂತಹ ಸೀರೆ ಹಾಗೂ ರವಿಕೆಗಳಿಗೆ ಹೆಚ್ಚು ಬೇಡಿಕೆ ಬಂದಿದೆ. ಸಾಂಪ್ರದಾಯಿಕ ಲುಕ್ ನೀಡುವ ದೇವಿ ಹಾಗೂ ದಸರಾ ಹಬ್ಬದಲ್ಲಿ ಅಂಬಾರಿ ಹೊತ್ತ ಆನೆ ವಿನ್ಯಾಸದ ಬ್ಲೌಸ್‌ಗಳು, ಸೀರೆಗಳು ಮೊದಲಿನಿಂದಲೂ ಮಾರುಕಟ್ಟೆಯಲ್ಲಿವೆ. ಹಬ್ಬದ ಸಮಯದಲ್ಲಿ ಅವುಗಳಿಗೆ ಬೇಡಿಕೆ ಹೆಚ್ಚುತ್ತದೆ' ಎನ್ನುತ್ತಾರೆ ಫ್ಯಾಷನ್ ಡಿಸೈನರ್ ನಂದಿನಿ ಜೂಲಿ.

ಬಂಗಾಲಿ ವಿನ್ಯಾಸದ ಬ್ಲೌಸ್‌ಗಳಿಗೆ ಹೊಂದುವಂತಹ ದೇಸಿ ಲುಕ್ ನೀಡುವ ಬಾರ್ಡರ್ ಸೀರೆಗಳು ಈಗ ಟ್ರೆಂಡ್ ಆಗಿವೆ. ಜತೆಗೆ ಈ ಸೀರೆಗಳಿಗೆ ಮ್ಯಾಚ್ ಆಗುವಂತಹ ದೇವಿ ಮುಖವಿರುವ ಸರಗಳಿಗೆ ಬೇಡಿಕೆ ಹೆಚ್ಚಿದೆ. ರವಿಕೆಯ ಬೆನ್ನು ಹಾಗೂ ತೋಳಿನ ಭಾಗದಲ್ಲಿ ದೇವಿಯ ಮುಖದ ಚಿತ್ತಾರವನ್ನು ವಿನ್ಯಾಸಗೊಳಿಸಲಾಗುತ್ತದೆ. ಕೆಲವು ಪ್ರಿಂಟ್‌ನಲ್ಲಿದ್ದರೆ ಇನ್ನು ಕೆಲವು ಹ್ಯಾಂಡ್ ವರ್ಕ್, ಪ್ಯಾಚ್ ವರ್ಕ್‌ನಲ್ಲಿ ಲಭ್ಯ. ಕಾಟನ್, ಸೆಮಿ ಕಾಟನ್ ಸೀರೆಗಳಿಗೆ ಈ ವಿನ್ಯಾಸದ ರವಿಕೆಗಳು ಹೆಚ್ಚು ಹೊಂದುತ್ತವೆ. ಈ ವಿನ್ಯಾಸದ ರೆಡಿಮೇಡ್ ಬ್ಲೌಸ್‌ಗಳಿಗೆ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಿದೆ. ಆನ್‌ಲೈನ್‌ನಲ್ಲೂ ಇವುಗಳ ಖರೀದಿ ಜೋರಾಗಿದೆ.



ಜೊತೆಗೆ ನಮ್ಮ ನಾಡಿನಲ್ಲಿ ಲಂಗ– ದಾವಣಿ, ಸೀರೆಗಳು ತಮ್ಮ ಸಾಂಪ್ರದಾಯಿಕ ಸ್ಥಾನವನ್ನು ಬಿಟ್ಟುಕೊಟ್ಟಿಲ್ಲ. ನವರಾತ್ರಿಯ ಒಂಬತ್ತು ದಿನಗಳೂ ಆಯಾ ದಿನದ ಬಣ್ಣದ ಸೀರೆ, ಲಂಗ– ದಾವಣಿ ಧರಿಸಿ ಬೀಗುತ್ತಾರೆ ಹೆಣ್ಣುಮಕ್ಕಳು. ಇನ್ನು ಸೀರೆಗಳಲ್ಲಿ ಗೌನ್, ಲಂಗ ದಾವಣಿ ಹೊಲಿಸಿಕೊಂಡು ತೊಡುವುದು ಈಗಿನ ಟ್ರೆಂಡ್.

'ಸೀರೆ ಉಡಲು ಕಷ್ಟ ಎನ್ನುವವರು ಹಳೆಯ ಅಥವಾ ಹೊಸ ಸೀರೆಗಳನ್ನೇ ಲೆಹೆಂಗಾ, ಲಾಂಗ್ ಗೌನ್, ಲಂಗ ದಾವಣಿಯಾಗಿ ರೂಪಾಂತರಿಸಿ ಕೊಂಡು ತೊಟ್ಟು ಮಿಂಚುತ್ತಾರೆ. ವೈವಿಧ್ಯಮಯ ಸೀರೆಗಳೂ ಈಗ ಟ್ರೆಂಡ್ ಆಗಿವೆ. ವಿರುದ್ಧ ಬಣ್ಣದ ಬ್ಲೌಸ್ ಹಾಗೂ ಸೀರೆ, ಫ್ಯಾನ್ಸಿ ಸೀರೆಗಳು, ಹಾಫ್ ಸೀರೆಗಳು ಹಬ್ಬದ ಸಮಯದಲ್ಲಿ ಟ್ರೆಂಡ್ ಸೃಷ್ಟಿಸಿವೆ. ಫ್ಯಾನ್ಸಿ ಸೀರೆ, ಕಾಂಜೀವರಂ, ರೇಷ್ಮೆ ಸೀರೆ, ಇಳಕಲ್, ಬನಾರಸ್, ಕಾಟನ್ ಸೀರೆಗಳು... ಹೀಗೆ ಎಲ್ಲ ಬಗೆಯ ಸೀರೆಗಳು ಹಬ್ಬದ ಸಮಯದಲ್ಲಿ ಮೆರುಗು ಹೆಚ್ಚಿಸುತ್ತವೆ. ನವರಾತ್ರಿ ಸಮಯದಲ್ಲಿ ನವ ಬಣ್ಣದ ಪ್ಲೇನ್ ಸೀರೆಗಳು ಹೆಚ್ಚು ಆಕರ್ಷಣೀಯ ಎನಿಸುತ್ತವೆ. ಕೈತುಂಬಾ ಬಳೆ, ಅದ್ದೂರಿಯಸರಗಳು, ಚೋಕಾ ಸೀರೆಯ ಮೆರುಗನ್ನು ಹೆಚ್ಚಿಸುತ್ತವೆ' ಎನ್ನುತ್ತಾರೆ ದಾವಣಗೆರೆಯಲ್ಲಿ ಅಪರ್ಣಾ ಬೋಟಿಕ್ ನಡೆಸುತ್ತಿರುವ ಸುಪ್ರಿಯಾ ವಿನೋದ್ ಪುಕಾಳೆ.

ಇನ್ನು ಮಿರರ್ ಕುರ್ತಾ, ಪ್ಲೇನ್ ಕುರ್ತಾ, ಪಲಾಜೊ ವಿತ್ ಕುರ್ತಾ, ಅನಾರ್ಕಲಿ ಡ್ರೆಸ್‌ಗಳನ್ನೂ ಹಬ್ಬದ ಸಮಯದಲ್ಲಿ ತೊಡಬಹುದು. ಶಾರ್ಟ್ ಕುರ್ತಾ ಹಾಗೂ ಧೋತಿ ಪ್ಯಾಂಟ್, ಲೇಯರ್ಡ್ ಅನಾರ್ಕಲಿ ಕುರ್ತಾ ಧರಿಸಿ ಬೀಗಬಹುದು. ಹಾಗೆಯೇ ಮಿರರ್ ವರ್ಕ್, ಕಸೂತಿ ವರ್ಕ್ ಇರುವ ಡೆನಿಮ್ ಜಾಕೆಟ್ ಜೊತೆಗೆ ಲೆಹೆಂಗಾ, ಸೀರೆ, ಕುರ್ತಾ ತೊಡಬಹುದು.



### ವಿವಿಧ ಬಣ್ಣಗಳೊಂದಿಗೆ ನವರಾತ್ರಿ

ಈ ಬಾರಿ ಅಕ್ಟೋಬರ್ 15ರಿಂದ 23ರವರೆಗೆ ನವರಾತ್ರಿ ಆಚರಿಸಲಾಗುತ್ತದೆ. ಒಂದೊಂದು ದಿನ ಒಂದೊಂದು ಬಣ್ಣದಂತೆ ನವವರ್ಣಗಳ ದಿರಿಸು ಧರಿಸಿ ಹಬ್ಬದ ಸಂಭ್ರಮವನ್ನು ಆನಂದಿಸಬಹುದು.

ಹಬ್ಬದ ಮೊದಲ ದಿನ ಅಕ್ಟೋಬರ್ 15ರ ಭಾನುವಾರ 'ಕಿತ್ತಳೆ' ಬಣ್ಣದ ದಿರಿಸು ಧರಿಸಬಹುದು. ಕೂಷ್ಮಾಂಡಾ ದೇವಿ ಆರಾಧನೆ ಮಾಡುವ ಆ ದಿನ ಕಿತ್ತಳೆ ಬಣ್ಣದ ಉಡುಪು ತೊಟ್ಟು ಪೂಜೆಯಲ್ಲಿ ಭಾಗವಹಿಸಬಹುದು.

ಕಿತ್ತಳೆ ಬಣ್ಣದ ಸೀರೆ, ಲೆಹೆಂಗಾ, ಕುರ್ತಾ ತೊಡಬಹುದು.

**2ನೇ ದಿನ ಅ. 16 ಸೋಮವಾರ** 'ಬಿಳಿ' ಬಣ್ಣದ ಉಡುಪು ಧರಿಸಿ. ಶಾಂತಿಯ ಸಂಕೇತವಾಗಿರುವ ಬಿಳಿ ಬಣ್ಣ ಶುದ್ಧತೆ ಹಾಗೂ ಮುಗ್ಧತೆಯನ್ನು ಪ್ರತಿನಿಧಿಸುತ್ತದೆ. ಸಾಮಾನ್ಯವಾಗಿ ಬಿಳಿ ಬಣ್ಣದ ಉಡುಪು ಪ್ರತಿಯೊಬ್ಬರ ವಾರ್ಡ್‌ರೋಬ್‌ನಲ್ಲೂ ಸ್ಥಾನ ಗಿಟ್ಟಿಸಿರುತ್ತದೆ. ಇರುವ ಡ್ರೆಸ್‌ಗೆ ನಿಮ್ಮ ಅಭಿರುಚಿಗೆ ತಕ್ಕಂತೆ ಟ್ರೆಂಡಿ ಲುಕ್ ನೀಡಿ ಧರಿಸಬಹುದು.

**3ನೇ ದಿನ ಅ. 17 ಮಂಗಳವಾರ:** 'ಕೆಂಪು' ಬಣ್ಣದ ಉಡುಗೆ ತೊಟ್ಟು ಮಿಂಚಬಹುದು. ಕೆಂಪು ಬಣ್ಣ ಆರೋಗ್ಯ, ಧೈರ್ಯ ಹಾಗೂ ಉತ್ಸಾಹವನ್ನು ಸಂಕೇತಿಸುತ್ತದೆ.

**4ನೇ ದಿನ ಅ. 18 ಬುಧವಾರ:** ಗಾಢ ನೀಲಿ ಬಣ್ಣದ ಉಡುಗೆ ಧರಿಸಿ. ಈ ಬಣ್ಣ ಬಹು ಜನರನ್ನು ಆಕರ್ಷಿಸಿದೆ. ಈ ಬಣ್ಣದ ವಸ್ತ್ರಗಳೂ ವಿನ್ಯಾಸಕಾರರ ಕೈಚಳಕದಲ್ಲಿ ವೈವಿಧ್ಯಮಯವಾಗಿ ರೂಪುಗೊಂಡಿವೆ. ಹಾಗಾಗಿ ನಿಮಗಿಷ್ಟದ ಮಾದರಿಯ ಬಟ್ಟೆ ಧರಿಸಿ ಬೀಗಬಹುದು.

**5ನೇ ದಿನ ಅ. 19 ಗುರುವಾರ:** 'ಹಳದಿ' ಬಣ್ಣದ ಉಡುಪು. ಸಂತೋಷ ಮತ್ತು ಉತ್ಸಾಹವನ್ನು ಸಂಕೇತಿಸುವ ಈ ಬಣ್ಣ ಶ್ಯಾಮಲ ವರ್ಣದವರಿಗೆ ಹೆಚ್ಚು ಹೊಂದುತ್ತದೆ.

**6ನೇ ದಿನ ಅ. 20 ಶುಕ್ರವಾರ:** 'ಹಸಿರು' ವರ್ಣದ ದಿರಿಸು ಧರಿಸಬಹುದು. ಪ್ರಕೃತಿ ಮತ್ತು ಸಮೃದ್ಧಿಯ ಸಂಕೇತವಾಗಿರುವ ಹಸಿರು ಬಣ್ಣ ಫಲವತ್ತತೆ, ಪ್ರಶಾಂತತೆಯನ್ನು ಪ್ರಚೋದಿಸುತ್ತದೆ.

**7ನೇ ದಿನ ಅ. 21 ಶನಿವಾರ:** 'ಬೂದು' ಬಣ್ಣದ ಉಡುಗೆ ತೊಟ್ಟು ಮಿಂಚಬಹುದು.

**8ನೇ ದಿನ ಅ. 22 ಭಾನುವಾರ:** 'ನೇರಳೆ' (ಪರ್ಪಲ್) ಬಣ್ಣದ ದಿರಿಸು ಧರಿಸಬಹುದು.

**9ನೇ ದಿನ ಅ. 23 ಸೋಮವಾರ:** 'ನವಿಲು ಹಸಿರು' ಬಣ್ಣದ ಉಡುಗೆ ತೊಡಬಹುದು.